# ನೀವು ಕೇಳಿದಿರಿ?

ಜಗದೀಶ ಬಿ. ಹೊಸೂರು, ಮೈಸೂರು

ಮೊಬೈಲ್ ನೋಡುವಾಗ ಇರುವ ಏಕಾಗ್ರತೆ ಪಾಠ ಕೇಳುವಾಗ ಇರುವುದಿಲ್ಲ. ಏಕೆ?



ಕಸ ತುಂಬುವಷ್ಟು ಸಲೀಸಾಗಿ ರಸ ತುಂಬದು.

ರಮಾ ಗೋವಿಂದರಾಜು, ಬೆಂಗಳೂರು

ಶ್ರೀಸಾಮಾನ್ಯರ ಬದುಕಿಗೆ ಬೆಲೆ ಬರುವುದು ಯಾವಾಗ?

ಮೆಡಿಕಲ್ ಇನ್ಶೂರೆನ್ಸ್ ರಿನ್ಯೂವಲ್ ಸಮಯದಲ್ಲಿ.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ

ನಿಜಕ್ಕೂ ಮಣ್ಣಿನ ಮಕ್ಕಳು ಎಂದರೆ ಯಾರು? ರೈತನ ಮಕ್ಕಳು ಎಂದರೆ ಯಾರು?

ಮಣ್ಣಿನ ಮಕ್ಕಳು ಗಿಡಮರಗಳು. ರೈತನ ಮಕ್ಕಳು ಅವನು ಬೆಳೆದ ಬೆಳೆ.

ವೆಂಪಾಶ್, ಪುತ್ತೂರು

ನಿದ್ರೆ ನೆಮ್ಮದಿ ಇರುವವರಿಗಷ್ಟೇ ಅಲ್ಲ, ಆಯಾಸಗೊಂಡವರಿಗೂ ಬರುತ್ತದೆ. ಏನಂತೀರಿ?



ಅದು ಆಯಾಸದ ನಿದ್ರೆ. ಇದು ಸುಖನಿದ್ರೆ.

ಮಲ್ಲಿಕಾರ್ಜುನ, ಸುರಧೇನುಪುರ

ಕೆಲವರು ಸಮಯ ತೋರದ ಕೈಗಡಿಯಾರ ಕಟ್ಟಿಕೊಂಡು ಅಡ್ಡಾಡುವುದೇಕೆ?

ಸಮಯವೆನ್ನುವುದು ನಮ್ಮ ಕೈಯಲ್ಲಿಲ್ಲ ಎಂದು ಸೂಚಿಸಲು.

ಕೃಷ್ಣ ಕೊಡಂಚ, ಬೆಂಗಳೂರು

ಅರಿವೆಗೂ, ಪರಿವೆಗೂ ಏನಾದರೂ ಸಂಬಂಧವಿದೆಯಾ?

ಹೂಂ. ಅರಿವೆಗಳ ಬಗ್ಗೆ ಇರುವ ಪರಿವೆಯೇ ಫ್ಯಾಷನ್.

ಬೂಕನಕೆರೆ ವಿಜೇಂದ್ರ, ಮೈಸೂರು

ಕೆಲವರು ಮನೆಯಲ್ಲೇ ಚಿನ್ನ ಇಟ್ಟುಕೊಂಡು ಹೊರಗೆ ಬೆಳ್ಳಿಗಾಗಿ ಹುಡುಕಾಡುತ್ತಾರಲ್ಲ?

ಚಿನ್ನ ದೇಹಕ್ಕೆ ಆತುಕೊಳ್ಳುತ್ತದೆ. ಬೆಳ್ಳಿಯನ್ನಾದರೆ ಚೊಂಬಾಗಿಸಬಹುದು.

ವಾಸಣ್ಣ, ಧಾರವಾಡ

ತಂತ್ರ, ಮಂತ್ರ, ಕುತಂತ್ರ ಮಾಡಿದರೂ ಕೆಲವೊಮ್ಮೆ ಕುರ್ಚಿ ಅತಂತ್ರ ಆಗುವುದೇಕೆ?

ಕುರ್ಚಿಯು ವಶೀಲಿಯ ಸಮತಟ್ಟಲ್ಲಿರದೆ ಭಿನ್ನಮತದ ಇಳಿಜಾರಲ್ಲಿ ಇರುವುದರಿಂದ.

ವೀರೇಶ ಬ. ಕುರಿ, ಸೋಂಪುರ

ಈಗಿನ ಬಹುತೇಕ ವಿದ್ಯಾರ್ಥಿಗಳು ಗುರುಗಳನ್ನು ಲಘುವಾಗಿ ಕಾಣಲು ಏನು ಕಾರಣವಿರಬಹುದು?

‘ಗೂಗಲ್ ಮುಂದೆ ಗುರುಗಳು ಗುಗ್ಗು’ ಎಂಬ ಧೋರಣೆ.

ವಿಜಯಕುಮಾರಿ ಧನ್ಯನಾಥನ್, ಚೆನ್ನೈ

ಸರ್ವಾಂತರ್ಯಾಮಿ ವೈರಸ್‌ನಿಂದ ಬಚಾವಾಗಲು ಜಾಗ ಇದೆಯೆ?

ಇದೆಯಲ್ಲ! ವೈರಸ್ಸನ್ನು ನಿರ್ವಾತಕ್ಕೆ ದಬ್ಬಿ ಎಲ್ಲೆಲ್ಲಿಯೂ ನೆಮ್ಮದಿಯಿಂದಿರಿ.

ಶ್ರೀನಿವಾಸ ಕೆ., ಬೆಂಗಳೂರು

ಮಳೆಯೇ ಬರದಿದ್ದರೆ ಬೆಂಗಳೂರಿನ ರಸ್ತೆಗಳು ಗುಂಡಿಮುಕ್ತ ಆಗಬಹುದೆ?

ಊಹೂಂ! ಅಣ್ಣಮ್ಮ, ಗಣೇಶ, ರಾಜ್ಯೋತ್ಸವಗಳಿಗೆ ಕಂಬ ನೆಡಲು ಗುಂಡಿ ಬೇಕಲ್ಲ!

ದುಂಡಪ್ಪ ನಂದೆನ್ನವರ, ಬೆಳಗಾವಿ

ದರ್ಶನಕ್ಕೂ, ಪ್ರದರ್ಶನಕ್ಕೂ ಇರುವ ವ್ಯತ್ಯಾಸವೇನು?

ಸ್ವಸ್ಥಿತಿಯಲ್ಲಿದ್ದಾಗ ದರ್ಶನ; ಸುಸ್ಥಿತಿಯಲ್ಲಿದ್ದಾಗ ಪ್ರದರ್ಶನ.

ಮಹಾವೀರ ಕಾಸರ, ಶಿವಮೊಗ್ಗ

ಪರೀಕ್ಷಾ ಸಮಯ ಮುಗಿಯುವುದನ್ನು ಸೂಚಿಸಲು ಗಂಟೆ ಬಾರಿಸುವರು. ಜೀವನ ಮುಗಿಯುವುದನ್ನು ಸೂಚಿಸಲು?

ವೆಂಟಿಲೇಟರ್ ತೆಗೆಯುವರು.

## ಬಹುಮಾನಿತ ಪ್ರಶ್ನೆ

ಅಜ್ಜಯ್ಯ ಮೂರ್ತಿ, ಭತ್ರಹಳ್ಳಿ

ಪಾಪಗಳಲ್ಲಿ ಮಿಂದೆದ್ದವ ಪುಣ್ಯಸ್ನಾನ ಮಾಡಿದರೆ ಪಾಪದ ಹೊರೆ ಯಾರಿಗೆ? ದೇವರಿಗಾ?

ಹೊರೆ ಇರದು. ಕಂಪ್ಯೂಟರಿಂದ ಡಿಲೀಟ್ ಆದ ಫೈಲಂತೆ ಪುಣ್ಯೋದಕದಿಂದ ಪಾಪ ಡಿಲೀಟ್.

ಫಾಲನೇತ್ರ ಸಜ್ಜನ, ಶಿರಸಿ

ಪುಸ್ತಕ ಬಿಡುಗಡೆಗೆ ಮೊದಲು ಬಂಧಿಸಲ್ಪಟ್ಟಿರುವುದೆ?

ಹಣ ಕೊಡುವವರೆಗೆ ಮುದ್ರಣಾಲಯದಲ್ಲಿ ಬಂಧಿತವಾಗಿರುತ್ತದಲ್ಲ.

ಕೆ.ಎಂ. ಕೊಟ್ರಸ್ವಾಮಿ, ಸಂಡೂರು

ಮುತ್ತಿಗೂ, ಮೃತ್ಯುವಿಗೂ ವ್ಯತ್ಯಾಸವೇನು?

ಮುತ್ತು ಕಾಮ, ಮೃತ್ಯು ಫುಲ್ ಸ್ಟಾಪ್.

ಎಂ.ಜಿ. ಉಮಾ, ಬಳ್ಳಾರಿ

ಬಾಳೆಹಣ್ಣು ತಿಂದರೆ ದೇಹ ಸದೃಢವಾಗುತ್ತೆ. ಬಾಳೆಹಣ್ಣಿನ ಸಿಪ್ಪೆಯ ಮೇಲೆ ಕಾಲಿಟ್ಟರೆ?



ಸದೃಢವಾದ ಕೋಲು ಕೈಗೆ ಬರುತ್ತದೆ.

ಎಸ್.ವಿ. ಶ್ರೀನಿವಾಸ್, ಮೈಸೂರು

ಒಂದು ವೇಳೆ ತೋಳ ಹಳ್ಳಕ್ಕೆ ಬೀಳದಿದ್ದರೆ ಏನಾಗುತ್ತದೆ?

ವಿಧಾನಸೌಧದಲ್ಲಿ ಮಂತ್ರಿಯಾಗುತ್ತದೆ.

ಚನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ

ಸರಳ ಸಜ್ಜನಿಕೆ ಉಳ್ಳವರು ಎಂದರೆ ಯಾರು?

ಸರಳು ಎಂದರೆ ಕಂಬಿ. ‘ಸರಳ ಸಜ್ಜನ’ ಎಂದರೆ ಕಂಬಿ ಕೆಲಸ ಮಾಡುವ ವಿನಯವಂತ.

ಬಿ. ಚಂದ್ರೇಗೌಡ, ಬೆಂಗಳೂರು

ನಂಬಿ ಕೆಟ್ಟವರಿಲ್ಲ ಎಂಬುದು ನಿಜವೆ?

ನಿಜ. ನಂಬಿದ ಬಡಪಾಯಿ ಈಗಿಲ್ಲ, ಹೋಗಿಬಿಟ್ಟರು!

■ ರಾಮ್